(i) ವಿಷಯ:- ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕ್‌ನಲ್ಲಿ ಮಳೆ ಬಾರದಿದ್ದುದರಿಂದ ರೈತರಿಗೆ ತೊಗರಿಬೆಳೆ ಬದಲು ಕಡಲೆ ಬೆಳೆ ಬಿತ್ತಣಿಕೆ ಮಾಡಲು ಅನುಕೂಲ ಮಾಡಿಕೊಡುವ ಬಗ್ಗೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ(ಸೇಡಂ):- ಮಾನ್ಯ ಅಧ್ಯಕ್ಷರೇ, ಈ ವರ್ಷ ಗುಲ್ಬರ್ಗಾ ಜಿಲ್ಲೆಯಲ್ಲಿ ಆದರಲ್ಲೂ ನಮ್ಮ ಸೇಡಂ ತಾಲ್ಲೂಕಿನಲ್ಲಿ ಹೆಚ್ಚಿನ ಕಡಲೆ ಬೆಳೆ ಬಿತ್ತಣಿಕೆ ಮಾಡಿರುವುದು ಸಹಜವಾಗಿದೆ. ಏಕೆಂದರೆ ಮಳೆ ಬಾರದೆ ವಾಣಿಜ್ಯ ಬೆಳೆಯಾದಂಥ ತೊಗರಿಬೇಳೆ ಬೆಳೆಯನ್ನು ಬಿತ್ತಣಿಕೆ ಮಾಡಿಲ್ಲ. ಈಗ ಮಳೆ ಬಂದರೂ ಬಿತ್ತಣಿಕೆ ಮಾಡಿದರೆ ಬೇಳೆಗೆ ಸರಿಯಾಗಿ ಬೆಳೆಯಾಗುವ ಸಂಭವವಿಲ್ಲ. ಇದರಿಂದ ರೈತರು ತೊಗರಿ ಬೆಳೆ ಭೂಮಿಯಲ್ಲಲ್ಲ ವಾಣಿಜ್ಯ ಬೆಳೆಯಾದ ಕಡಲೆ ಬೆಳೆಯನ್ನು ಹೆಚ್ಚು ಬಿತ್ತಣಿಕೆ ಮಾಡುವ ಸಂಭವ ಇದ್ದುದಕ್ಕಾಗಿ ಕಡಲೆ ಬೀಜದ ವ್ಯವಸ್ಥೆ ಮಾಡಿ ಸಕಾಲಕ್ಕೆ ಕಂಗಾಲಾಗಿರುವ ರೈತರಿಗೆ ಸಾಲದ ರೂಪದಲ್ಲಿ ಅಥವಾ ರಿಯಾಯಿತಿ ದರದಲ್ಲಿ ಸರ್ಕಾರದ ವತಿಯಿಂದ ಸರಬರಾಜು ಮಾಡುವ ವ್ಯವಸ್ಥೆ ಮಾಡಲು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎನ್.ಹುಚ್ಚಮಾಸ್ತಿಗೌಡ(ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೇ,ಸೇಡಂ ತಾಲ್ಲೂಕಿನಲ್ಲಿ1993-94ನೇ ಸಾಲಿನಲ್ಲಿ ಬಿದ್ದ ಮಳೆ ವಿವರ ಹೇಳಬೇಕೆಂದರೆ, ಏಪ್ರಿಲ್‌ನಲ್ಲಿ 35.8 ಎಮ್ ಎಮ್ ಮೇ ತಿಂಗಳಲ್ಲಿ ಬಿದ್ದ ಮಳೆ 42.3 ಎಮ್ ಎಮ್ ಶೇಕಡಾವಾರು 119. ಮೇ ತಿಂಗಳಲ್ಲಿ 43.9 ಎಮ್ ಎಮ್ ಬಿದ್ದ ಮಳೆ ಸಾಮಾನ್ಯವಾಗಿ ಬರತಕ್ಕಂಥದ್ದು 33.4, ಶೇಕಡಾವಾರು 76 ರಷ್ಟು ಜೂನ್‌ನಲ್ಲಿ 117 ಎಮ್ ಎಮ್, 7.4 ಬಿದ್ದ ಮಳೆ. ಶೇಕಡಾವಾರು ಕೇವಲ ಆರರಷ್ಟು. ಜುಲೈನಲ್ಲಿ 226.8 ಎಮ್ ಎಮ್, ಬಿದ್ದ ಮಳೆ 176.8 ಶೇಕಡಾವಾರು 76. ಆಗಸ್ಟ್‌ನಲ್ಲಿ 181.8 ಬಿದ್ದ ಮಳೆ 82.4, ಶೇಕಡಾವಾರು 43. ಮೇಲ್ಕಂಡ ಮಳೆ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಬಿತ್ತನೆ ಕಾಲವಾದ ಜೂನ್ ಮಾಹೆಯಲ್ಲಿ ಬೀಳಬೇಕಾಗಿದ್ದ ಮಳೆ ಶೇಕಡ ಸದರಿ ತಾಲ್ಲೂಕಿನಲ್ಲಿ ಬಿತ್ತನೆ ಆಗಬೇಕಾದ ಕಾಲದ ಮೇಲೆ ಹಾಗೂ ತೊಗರಿ ಬೆಳೆ ಗುತ್ತಿಗೆ ತೆಗೆದುಕೊಂಡಿವೆ. ಆದರೂ ಜುಲೈ 20ರ ನಂತರ ಬಿದ್ದ ಮಳೆಯಿಂದಾಗಿ ಸೂರ್ಯಕಾಂತಿ ಬೆಳೆಯ ಬಿತ್ತನೆಯನ್ನು ತೆಗೆದುಕೊಳ್ಳಲಾಗಿತ್ತು. ಈ ಬೆಳೆ ಬಿತ್ತನೆಯು ಬಿತ್ತನೆಯಾದ ಪ್ರದೇಶದ ವಿವರ ಹೆಕ್ಟೇರಿನಲ್ಲಿ, ಧಾನ್ಯಗಳು 3,730 ಮುಂಗಾರು ಮಳೆ, ಸಾಧನೆ 330 ಶೇಕಡಾವಾರು 9, ಎರಡು ದ್ವಿದಳ ಧಾನ್ಯ ಬೆಳೆ ಮತ್ತು ತೊಗರಿ ಮತ್ತು ಹುರಳಿ 28,875 ಮುಂಗಾರಿನ ಗುರಿ; ಆದರೆ ಸಾಧನೆ 20,325 ಶೇಕಡಾವಾರು 71. ನೆಲಗಡಲೆ 415, ಬೇಕಾದ್ದು 415-4.765ಶೇಕಡಾವಾರು 10, ತೊಗರಿ 23,100 ಸಾಧನೆ ಶೇಕಡ 4,550. ಶೇಕಡಾವಾರು 521, ಸೂರ್ಯಕಾಂತಿ 765 ಮುಂಗಾರಿನ ಗುರಿ ಆದರೆ ಬಿದ್ದ ಮಳೆ 4,256, ಶೇಕಡಾವಾರು 541 ಬಿತ್ತನೆ ಮುಂದುವರಿದಿದೆ. ನೆಲಗಡಲೆ ಬಿತ್ತನೆ ಕಾಲದಲ್ಲಿ ಈಗಾಗಲೇ ಮುಂದುವರಿದಿರುವುದರಿಂದ ಈ ಬೆಳೆಯ ಬಿತ್ತನೆ ಬೀಜವನ್ನು ಸರ್ಕಾರದ ವತಿಯಿಂದ ಸಾಲದ ರೂಪದಲ್ಲಿ ಬಿತ್ತನೆ ಪ್ರಸಂಗವು ತ್ವರಿತಗತಿಯಲ್ಲಿದೆ. ಆದರೆ ಈ ಭಾಗದ ರೈತರು ಪರ್ಯಾಯವಾಗಿ ಸೂರ್ಯಕಾಂತಿ ಬೆಳೆಯನ್ನು ಈಗಾಗಲೇ ತೆಗೆದುಕೊಳ್ಳುತ್ತಿರುವುದರಿಂದ ಈ ಕ್ಷೇತ್ರದ ಎಲ್ಲಾ ಬಿತ್ತನೆ ಆಗುವ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಆಗುವ ಸಂಭವ ಇರುವುದರಿಂದ ರೈತರು ಕಂಗಾಲಾಗುವ ಅವಶ್ಯಕತೆಯಿಲ್ಲ. ಅಲ್ಲದೆ ರಾಜ್ಯದಲ್ಲಿ ಬಿತ್ತನೆ ಬೀಜದ ಕೊರತೆಯೂ ಸಹ ಇರುವುದಿಲ್ಲ.

(ii) ವಿಷಯ:- ರಾಮನವಮಿ ದಿನ ಭಟ್ಕಳದಲ್ಲಿ ರಥದ ಮೇಲೆ ಕಲ್ಲು ಎಸೆದ ಬಗ್ಗೆ:-

ಶ್ರೀ ಆರ್ .ಎನ್.ನಾಯಕ್(ಭಟ್ಕಳ):- ಮಾನ್ಯ ಅಧ್ಯಕ್ಷರೇ, ಕಳೆದ ರಾಮ ನವಮಿಯ ದಿವಸ ಭಟ್ಕಳದಲ್ಲಿ ರಥದ ಮೇಲೆ ಕೆಲವು ತಿಳಿಗೇಡಿಗಳು ಕಲ್ಲು ಎಸೆದು ಗಲಭೆ ಮಾಡಿದರು. ಆ ವಿಚಾರವಾಗಿ ನಾನು ಶಾಸನ ಸಭೆಯಲ್ಲಿ ಕೂಲಂಕುಷವಾಗಿ ಎಲ್ಲಾ ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಯಡಿಯೂರಪ್ಪನವರು ಮತ್ತು ಈಶ್ವರಪ್ಪನವರು ಎಲ್ಲರೂ ಈ ವಿಚಾರವಾಗಿ ಮಾತನಾಡಿದರು. ಅದಾದನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಭಟ್ಕಳಕ್ಕೆ ಬಂದಿದ್ದರು. ಭಟ್ಕಳದಲ್ಲಿ ಸ್ವತಃ ಅಲ್ಲಿನ ಪ್ರಸ್ತುತ ಸ್ಥಿತಿಯನ್ನು ಅವರು ನೋಡಿ ಅರಿತರು. ಅವರು ಭಟ್ಕಳಕ್ಕೆ ಬಂದು ಹೋದ ದಿವಸ ಅದೇ ಸಾಯಂಕಾಲ ಮತ್ತೊಮ್ಮೆ ಗಲಭೆಯಾಗಿ ಸಾವು ನೋವು ಮತ್ತು ಆಸ್ತಿಪಾಸ್ತಿಗಳಿಗೆ ಹಾನಿಯಾಯಿತು. ಅದಾದನಂತರ ಮತ್ತೊಮ್ಮೆ ಮರು ದಿವಸವೇ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳು ಭಟ್ಕಳಕ್ಕೆ ಬಂದು ಐ.ಬಿ.ಯಲ್ಲಿ ಕುಳಿತು ಶಾಂತಿಸಭೆಯನ್ನು ನಡೆಸುತ್ತಿರಬೇಕಾದರೆ 200-300 ಅಡಿ ಆಚೆ ಡೈನಾಮೈಟ್ ಸಿಡಿಸುವ, ಗುಂಡು ಹಾರಿಸುವ, ಮನೆಗಳಿಗೆ ಬೆಂಕಿ ಹಚ್ಚುವ ಕಾರ್ಯಕ್ರಮ ನಡೆಯಿತು. ಅದು ಪೋಲೀಸ್ ಅಧಿಕಾರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಇದ್ದಾಗಲೇ ಗಲಭೆಯಾಯಿತು. ಅದಾದ ನಂತರ ಸ್ವಲ್ಪಮಟ್ಟಿಗೆ ತನ್ನಿಂದ ತಾನೇ ತಣ್ಣಗಾದ ಮೇಲೆ ಅಲ್ಲಿಯ ಲೆಕ್ಚರರ್ ಒಬ್ಬರಿಗೆ ರಾತ್ರಿ ಹೊತ್ತು ಸಾಯಂಕಾಲ 7ಗಂಟೆಗೆ ಗುಂಡು ಹಾರಿಸಿದ್ದರಿಂದ ಮತ್ತೆ ಗಲಭೆ ಪ್ರಾರಂಭವಾಗಿ 3-4 ಜನರು ಸತ್ತರು. ಇದಾದ ನಂತರ ಮತ್ತೆ ಮೊನ್ನೆ 4-5 ದಿವಸಗಳ ಹಿಂದೆ ಗಲಭೆ ಪ್ರಾರಂಭವಾಗಿ ತಿಳಿಗೇಡಿಗಳ ತಂತ್ರದಂತೆ ಸರಿಯಾಗಿ ಸಾಯಂಕಾಲ 7.10 ಗಂಟೆಗೆ ಭಟ್ಕಳದಲ್ಲಿ 4 ಕಡೆಗಳಲ್ಲಿ ಅಮಾಯಕ ಜನರನ್ನು ಅಟ್ಯಾಕ್ ಮಾಡಿದಂತಹ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ಮಾಡಿದರು. ಒಬ್ಬರಿಗೆ ಇಂಜಿನಿಯರ್ ಕಾಲೇಜ್‌ನಿಂದ ಕೆಲಸ ಮಾಡಿ ಬರುತ್ತಿದಂತಹ ಆಚಾರಿ ಎನ್ನುವವರನ್ನು ಮಾರಾಕಾಸ್ತ್ರಗಳಿಂದ ಹೊಡೆದ್ದರಿಂದ ಅವನನ್ನು ಮಣಿಪಾಲ್ ಆಸ್ಪತ್ರೆಗೆ ಕಳುಹಿಸಲಾಯಿತು. ಅಂಗಡಿ ಮುಚ್ಚಿಕೊಂಡು ಮನೆಗೆ ಹೋಗುತ್ತಿದ್ದಂತಹ ಒಬ್ಬನನ್ನು ನಾಪತ್ತೆ ಮಾಡಿದರು. ಇನ್ನೊಬ್ಬನ ವಿಚಾರವಾಗಿ ತನಿಖೆ ಮಾಡಿದಾಗ ಭಟ್ಕಳದ 7 ಕಿ.ಮೀ ಆಚೆಗೆ ಒಯ್ದು ಬೆಟ್ಟದಲ್ಲಿ ಅಮಾನುಷವಾಗಿ ಕೊಲೆ ಮಾಡಿ ಶವವನ್ನು ಅಮಾನುಷವಾಗಿ ಎಸೆಯಲಾಗಿತ್ತು ಮತ್ತು ಅಂಗಡಿಯನ್ನು ಮುಚ್ಚಿ ಮನೆಗೆ ಹೋಗುತ್ತಿದ್ದವನನ್ನು ಬಲಾತ್ಕಾರವಾಗಿ ಎತ್ತಿಕೊಂಡು ಹೋಗಿ ಕೊಂದು ಉಪ್ಪಿನ ಚೀಲದಲ್ಲಿ ಹಾಕಿ 10 ಅಡಿ ಆಳವನ್ನು ತೋಡಿ ಅವನನ್ನು ಮತ್ತು ಅವನ ಸೈಕಲ್ ಅನ್ನು ಆ ಹೊಂಡದಲ್ಲಿ ಹಾಕಿ ಆ ಮನುಷ್ಯನನ್ನು ನಾಪತ್ತೆ ಮಾಡಿದ್ದಾರೆ. ಈಗ ಇಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದೆ. ಇದು ಭಟ್ಕಳದಲ್ಲಿ ನಡೆದ ವಿಚಾರವನ್ನು ನಾನು ನನಗೆ ತಿಳಿದ ಮಟ್ಟಿಗೆ ಹೇಳಿದ್ದೇನೆ. ಇಲ್ಲಿ ನನ್ನ ಅಪಾದನೆ ಎಂದರೆ ಅಲ್ಲಿಂದ ಇಲ್ಲಿಯವರೆಗೂ ಭಟ್ಕಳದಲ್ಲಿ ಪೋಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಪೋಲೀಸ ಇಲಾಖೆ ತನ್ನ ಶಕ್ತಿ ಗಳಿಸಿಕೊಂಡು ಅಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲದಂತಹ ವಾತಾವರಣ ಅಲ್ಲಿ ನಿರ್ಮಾಣವಾಗಿದೆ. ಸುಮಾರು ಈ ತನಕ ಅಲ್ಲಿ 13 ಜನರ ಕೊಲೆಯಾಗಿದೆ. ಸುಮಾರು ಕೋಟಿ ರೂಪಾಯಿಯಷ್ಟು ಆಸ್ತಿಪಾಸ್ತಿ ನಾಶವಾಗಿದೆ. ಪೋಲೀಸ್ ಇಲಾಖೆಯವರು ಎಂತಹ ಕನಿಷ್ಟ ದರ್ಜೆಯ ಕೆಲಸವನ್ನು ಅಲ್ಲಿ ಮಾಡುತ್ತಿದ್ದಾರೆ ಎಂದರೆ...

ಉಪಾಧ್ಯಕ್ಷರು:- ನೀವು ಮುಖ್ಯಮಂತ್ರಿಗಳ ಗಮನಕ್ಕೆ ಏನು ತರಬೇಕೋ ಆ ವಿಚಾರವನ್ನು ತನ್ನಿ; ವಿಸ್ತಾರವಾಗಿ ಪ್ರಸ್ತಾವನೆ ಮಾಡಬೇಡಿ.

ಶ್ರೀ ಆರ್.ಎನ್.ನಾಯಕ್:- ಈ ರೀತಿ ಅಲ್ಲಿ ನಡೆದಿದೆ. ಸರ್ಕಾರ ಏನು ಇದರ ಬಗ್ಗೆ ಕ್ರಮ ಕೈಗೊಂಡಿದೆ ಮತ್ತು ಈಗ ಏನು ಕ್ರಮವನ್ನು ಕೈಗೊಳ್ಳುತ್ತಿದೆ, ಏನು ಪ್ರಯತ್ನ ನಡೆದಿದೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ನೀಡಬೇಕು ಮತ್ತು ನಂತರ ನನಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ, ನಾನು ಬಹಳ ವಿವರವಾಗಿ ಹೋಗುವುದಿಲ್ಲ ಮತ್ತು ಆ ಭಾಗದ ಶಾಸಕರು ವಿವರವಾಗಿ ಹೇಳಿದ್ದಾರೆ. ನಾನು ಇಷ್ಟೇ ಹೇಳುತ್ತಿದ್ದೇನೆ, ಹಿಂದೆ ಭಟ್ಕಳದಲ್ಲಿ ಏನು ಆಯಿತು, ಅದು ತಮಗೆಲ್ಲಾ ಗೊತ್ತಿದೆ. ಅದರ ಬಗ್ಗೆ ನಾನು ಬಹಳ ವಿವರವಾಗಿ ಹೋಗುವುದಿಲ್ಲ. ಆದರೆ ಕಳೆದ ಏಪ್ರಿಲ್ ತಿಂಗಳಿನಿಂದ ಇವತ್ತಿನ ತನಕ 14 ಕೊಲೆಗಳು ಆಗಿವೆ. ಇವತ್ತು ತಮ್ಮ ಸರ್ಕಾರಕ್ಕೆ ಈ ವಾತಾವರಣದ ನಾರ್ಮಲ್‌ಸಿಯನ್ನು ಕಂಟ್ರೋಲ್ ಮಾಡುವುದಕ್ಕೆ ಆಗಿಲ್ಲ. ತಮಗೆ ಮನಸ್ಸಿಲ್ಲ ಎಂದು ನಾನು ಹೇಳುತ್ತಾ ಇಲ್ಲ, ಆದರೆ ಎಲ್ಲಿ ತಪ್ಪು ಇದೆ ಅದನ್ನು ನೀವು ಕಂಡು ಹಿಡಿಯುತ್ತಾ ಇಲ್ಲ. ನಾನು ಅದನ್ನು ತಮ್ಮ ಗಮನಕ್ಕೂ ಮತ್ತು ಡಿಜಿಪಿಯವರ ಗಮನಕ್ಕೂ ಸಹ ತಂದೆ. ಅಲ್ಲಿ ಇದ್ದಂತಹ ಕಂಬೆ ಎನ್ನುವಂತಹ ಹೊನ್ನಾವರದ ಸಿಪಿಐ ಅಲ್ಲಿ ಜನರ ಕೈಕಾಲು ಮುರಿದಿದ್ದಾನೆ. ಏನು ಕ್ರಮವನ್ನೂ ಅಧಿಕಾರಿಗಳು ತೆಗೆದುಕೊಂಡಿಲ್ಲ. ಇವತ್ತು ಜನರ ವಿಶ್ವಾಸ ಸಂಪಾದನೆ ಮಾಡುವುದಕ್ಕೆ ಸ್ಥಳೀಯ ಪೋಲೀಸ್ ಸಂಪೂರ್ಣವಾಗಿ ವಿಫಲವಾಗಿದೆ. ಯಾವ ತನಕ ತಾವು ಭಟ್ಕಳ ಅಥವಾ ಹೊನ್ನಾವರದಲ್ಲಿ ಒಳ್ಳೆಯ ದಕ್ಷ ಅಧಿಕಾರಿ, ಯಾರು ಇಂಪಾರ್ಷಿಯಲ್ ಆಗಿ ಕೆಲಸ ಮಾಡುತ್ತಾರೆ ಅಂತಹವರನ್ನು ಹಾಕುವುದಿಲ್ಲವೋ ಆ ತನಕ ಈ ಗಲಭೆಗಳು ನಡೆಯುತ್ತವೆ. ಹಾಗಾಗಿ ಪುನಃ 2 ಕೊಲೆಗಳು ಆಗಿದೆ. ಒಬ್ಬ ತೀವ್ರವಾಗಿ ಗಾಯಗೊಂಡಿದ್ದಾನೆ ಇಲ್ಲಿ ನಾನು ರಾಜಕೀಯವಾಗಿ ಇದನ್ನು ಕ್ಯಾಪಿಟಲ್ ಮಾಡಿಕೊಳ್ಳುವುದಕ್ಕೆ ಇಷ್ಟ ಇಲ್ಲ. ಭಟ್ಕಳದಲ್ಲಿ ಇವತ್ತು ಭಯದ ವಾತಾವರಣ ಇದೆ. ಬಹಳಷ್ಟು ಜನ ನಮಗೆ ಫೋನ್ ಮಾಡುತ್ತಿದ್ದಾರೆ, ಎಷ್ಟೋ ಜನ ಭಟ್ಕಳ ಬಿಟ್ಟು ಹೋಗುತ್ತಿದ್ದಾರೆ. ಇವತ್ತು ಭಟ್ಕಳದಲ್ಲಿ ಯಾವುದೇ ತರಹದ ಶಾಂತಿ ಸೌಹಾರ್ದ ಉಳಿಯುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಭಾವನೆ ಜನರಲ್ಲಿ ಬರುತ್ತಿದೆ. ಆ ರೀತಿ ಆಗಬಾರದು, ಅದು ಒಂದು ಒಳ್ಳೆಯ ಪಟ್ಟಣ. ಅಲ್ಲಿನ ಜನರು ಶಾಂತಿಪ್ರಿಯರು. ಇಲ್ಲಿ ಅಲ್ಪಸಂಖ್ಯಾತರಾಗಲಿ, ಹಿಂದುಗಳಾಗಲಿ, ಯಾರಾದರಾಗಿದ್ದರೂ ಸಹ ವ್ಯಾಜ್ಯ, ಗಲಭೆ ಆಗದಂತೆ ನೋಡಿಕೊಳ್ಳುತ್ತಾರೆ. ಅವರಲ್ಲಿ ಸಾಕಷ್ಟು ಸೌಹಾರ್ದತೆ, ಶಾಂತಿ, ಪ್ರೀತಿ ಇದೆ. ಆದರೆ ಕೆಲವು ಯುವಕರು ಎಂದರೆ ಆಂಟಿ ಸೋಷಿಯಲ್ ಎಲಿಮೆಂಟ್ಸ್, ಇದರ ಲಾಭ ಪಡೆಯುತ್ತಿದ್ದಾರೆ. ಯಾವ ತನಕ ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲವೋ, ಅಲ್ಲಿಯ ತನಕ ಇದು ಬಹಳ ಕಷ್ಟವಾಗಬಹುದು. ಹಾಗಾಗಿ ಇವತ್ತು ಭಟ್ಕಳದಲ್ಲಿ ನಾರ್ಮಲ್‌ಸಿ ಇನ್ನೂ ಬಂದಿಲ್ಲ. ಇದು 5-6 ತಿಂಗಳಾದರೂ ಬರುತ್ತಾ ಇಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಅಲ್ಲಿಗೆ ಮೂರು ನಾಲ್ಕು ಸಲ ಹೋಗಿಬಂದಿದ್ದೇನೆ. ಯಾವಾಗ ಗಲಭೆಗಳು ಆಗುತ್ತದೆ ಆವಾಗಲೆಲ್ಲಾ ನಾನು ಹೋಗಿ ಬರುತಿದ್ದೇನೆ. ಆದರೆ ಇವೊತ್ತು ಅಲ್ಲಿಗೆ ಹೋಗುವುದಕ್ಕೆ ಆಗುತ್ತಾ ಇಲ್ಲ. ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಹಾಗಾಗಿ ತಾವು ಜನರಲ್ಲಿ ಒಂದು ಕಾನ್‌ಫಿಡೆನ್ಸ್ ಬರುವ ಹಾಗೆ ಆಗಿ ಕ್ರಮ ತೆಗೆದುಕೊಳ್ಳಿ. ಇವತ್ತು ಅಲ್ಲಿ ಯಾರ ಕೊಲೆಯಾಗಿದೆ, ಯಾರು ಗಾಯಗೊಂಡಿದ್ದಾರೆ ಅವರಿಗೆ ಕಾಂಪನ್‌ಸೇಷನ್ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ತಾವು ನಂಜನಗೂಡು ತಾಲ್ಲೂಕಿಗೆ ಹೋಗಿದ್ದೀರಿ. ಅಲ್ಲಿ ಏನು ಡ್ಯಾಮೇಜ್ ಆಗಿ ಲಾಸ್ ಆಯಿತು, ಅವರಿಗೆ

ತಾವು ಕಾಂಪನ್‌ಸೇಷನ್ ಕೊಟ್ಟಿದ್ದೀರಿ. ಇಲ್ಲಿ ಒಂದು ಲಕ್ಷ ರೂಪಾಯಿ ವಾಸ್ ಆದರೆ 10 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಪೈ ಎನ್ನುವವರಿಗೆ 28 ಲಕ್ಷ ರೂಪಾಯಿ ಲಾಸ್ ಆಗಿದೆ. ಇಬ್ರಾಹಿಂ ಎನ್ನುವವರಿಗೆ 2 ಸಲ ಅಟ್ಯಾಕ್ ಮಾಡಿದಾಗ 30-40 ಲಕ್ಷ ರೂಪಾಯಿ ಲಾಸ್ ಆಯಿತು. ಅವರಿಗೆ 20-25 ಸಾವಿರ ರೂಪಾಯಿ ಪರಿಹಾರ ಕೊಟ್ಟರಿ ಈ ರೀತಿಯಾದರೆ ಯಾವ ಪ್ರಕಾರ ಅವರಿಗೆ ಕಾನ್‌ಫಿಡೆನ್ಸ್ ರಿಸ್ಟೋರ್ ಮಾಡುವುದಕ್ಕೆ ಸಾಧ್ಯ? ಆದುದರಿಂದ ತಾವು ಇದರ ಬಗ್ಗೆ ಬೇಕಾದರೆ ಒಂದು ಮೀಟಿಂಗ್ ಕರೆಯಿರಿ;ನಾವು ಬಂದು ಸಲಹೆ ಕೊಡುತ್ತೇವೆ. ಮತ್ತು ಈ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ತಾವು ಪ್ರಯತ್ನ ಮಾಡಿ. ಅವರಲ್ಲಿ ಕಾನ್‌ಫಿಡೆನ್ಸ್ ರಿಸ್ಟೋರ್ ಮಾಡುವುದಕ್ಕೆ ಮತ್ತು ಪೀಸ್ ರಿಸ್ಟೋರ್ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ನಾನು ಒತ್ತಾಯಿಸುತ್ತೇನೆ.

ಉಪಾಧ್ಯಕ್ಷರು:- ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ಮಾನ್ಯ ಈಶ್ವರಪ್ಪನವರೇ ಮತ್ತು ಬೈರೇಗೌಡರೇ, ದಯವಿಟ್ಟು ತಾವುಗಳು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಉಪಾಧ್ಯಕ್ಷರೇ, ಅಲ್ಲಿ 12 ಜನ ಸತ್ತಿದ್ದಾರೆ. ಅದರಲ್ಲಿ 3 ಜನ ನಾಪತ್ತೆಯಾಗಿದ್ದಾರೆ. ಮೈಮೇಲೆ ಬಿದ್ದಂತಹ 36 ಗುಂಡುಗಳನ್ನು ಮಣಿಪಾಲ್ ಆಸ್ಪತ್ರೆಯಲ್ಲಿ ತೆಗೆದ ಬಗ್ಗೆ ಇವತ್ತಿನ ತನಕವೂ ಏನೂ ಕ್ರಮ ಕೈಗೊಂಡಿಲ್ಲ. ನಾನು ಇದನ್ನು ತುಂಬಾ ನೋವಿನಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಜನ ಆಮಾಯಕ ವ್ಯಕ್ತಿಗಳಿಗೆ ಗುಂಡು ಬಿದ್ದಿದೆ. ಆದರಲ್ಲಿ 14 ಜನ ಸತ್ತಿದ್ದಾರೆ. ಆಸ್ಪತ್ರೆಗಳಲ್ಲಿ ತೆಗೆದಿರುವ ಸಾಕಷ್ಟು ಗುಂಡುಗಳಿವೆ. ಈ ಗುಂಡುಗಳು ಎಲ್ಲಿಂದ ಬಂದಿದೆ ಎಂಬುದರ ಬಗ್ಗೆ ತನಿಖೆಯನ್ನೂ ಕೂಡ ಮಾಡಿಲ್ಲ. ಒಬ್ಬ ಹೆಡ್ ಕಾನ್ಸ್‌ಟೇಬಲ್ ಗಣಪ ಹೂವ ನಾಯಕ ಎನ್ನುವವರಿಗೆ ಸರ್ಕಾರದಿಂದ ಏನೂ ಪರಿಹಾರ ಕೂಡ ಕೊಟ್ಟಿಲ್ಲ. ಇದನ್ನು ಜನ ರೊಚ್ಚಿಗೆದ್ದು ಪ್ರತಿಭಟನೆ ಮಾಡುವುದಕ್ಕೆ ಹೋಗುತ್ತಿರತಕ್ಕಂತಹ ಸಂದರ್ಭದಲ್ಲಿ ಈ ರೀತಿ ಕೊಲೆಗಳು ಆಗುತ್ತಿವೆ. ಈ ರೀತಿ ಅಮಾಯಕ ವ್ಯಕ್ತಿಗಳು ನಾಪತ್ತೆ ಆಗಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು ಎಂದು ಸರ್ಕಾರಕ್ಕೆ ಒತ್ತಡ ತರತಕ್ಕಂತಹ ಸಂದರ್ಭದಲ್ಲಿ ಬಂದ್ ಕಾಲ್ ಮಾಡಿರತಕ್ಕಂತಹ ಸಂದರ್ಭದಲ್ಲಿ ಯಾರೋ ಅಮಾಯಕರನ್ನು ಅರೆಸ್ಟ್ ಮಾಡಿ ಬಳ್ಳಾರಿ ಜೈಲಿಗೆ ಕಳುಹಿಸತಕ್ಕಂತಹ ಪ್ರಯತ್ನ ನಡೆದಿದೆ.ಇದು ತುಂಬಾ ಅನ್ಯಾಯ. ಅದಕ್ಕೋಸ್ಕರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕೊನೆಗೆ ಇಡೀ....

ಶ್ರೀ ಆರ್.ವಿ.ದೇಶಪಾಂಡೆ:- ಆ ಅಧಿಕಾರ ನಿಮಗೆ ಇಲ್ಲ; ಅಲ್ಲಿ ಕರ್ಫ್ಯೂ ಇದೆ; ಹಿಂದೂ ಏಕತಾ ಸಮಾಜದವರಿಗೆ ತಾವು ಹೇಳಿ ಬಂದ್‌ಕರೆಕೊಡಿಸಿದ್ದರಿಂದ ಹೊನ್ನಾವರ ಸುತ್ತಮುತ್ತ ಎಲ್ಲಾ ಗಲಾಟೆ ನಡೆದಿದೆ. ಅದು ಮಾಡುವುದು ಸರಿಯಲ್ಲ. ಅವರಿಗೆ ನೀವು ಹೆಚ್ಚು ಪ್ರಚೋದನೆಯನ್ನು ಕೊಟ್ಟರಿ.

ಶ್ರೀ ಕೆ.ಎಸ್ ಈಶ್ವರಪ್ಪ:- ಅದನ್ನು ನೀವು ನನಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ನಾನು ಮಾನ್ಯ ಅಧ್ಯಕ್ಷರೇ, ತಮ್ಮ ಹತ್ತಿರ ಮಾತನಾಡುತ್ತಿದ್ದೇನೆ. ನನಗೆ ಅವಕಾಶವನ್ನು ಮಾಡಿಕೊಡಿ.

ಉಪಾಧ್ಯಕ್ಷರು:- ಮಾನ್ಯ ಈಶ್ವರಪ್ಪನವರೇ, ತಾವು ಮಧ್ಯೆ ಎದ್ದುಬಿಟ್ಟು ಯಾವ ನಿಯಮದ ಪ್ರಕಾರ ಇದನ್ನು ಪ್ರಸ್ತಾವನೆ ಮಾಡುತ್ತಿದ್ದೀರಿ, ದಯವಿಟ್ಟು ಇದಕ್ಕೆ ನಾನು ಅಲೋ ಮಾಡುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ನನಗೆ ಅವಕಾಶವನ್ನು ಕೊಡಲೇಬೇಕು.

ಉಪಾಧ್ಯಕ್ಷರು:- ಮಾನ್ಯ ಈಶ್ವರಪ್ಪನವರು ಮಾತನಾಡುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಉಪಾಧ್ಯಕ್ಷರ ಆದೇಶದ ಮೇರೆಗೆ ಈ ಹಂತದಲ್ಲಿ ರೆಕಾರ್ಡ್ ಮಾಡಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ:- ನಾನು ಉತ್ತರ ಹೇಳಿದಮೇಲೆ ತಾವು ಕೇಳಿ.

ಶ್ರೀ ಕೆ.ಎಸ್ ಈಶ್ವರಪ್ಪ:- ಇದು ಯಾವ ನ್ಯಾಯ? ನನ್ನಹತ್ತಿರ ಇಷ್ಟೆಲ್ಲಾ ವಿವರಗಳಿವೆ. ಸತ್ತಿರುವ ಜನರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡದೆ ಇನ್ನು ಎಲ್ಲಿ ಮಾಡಲಿ? ನಾನು ಅದಕ್ಕೋಸ್ಕರ ಸಭಾಧ್ಯಕ್ಷರಿಗೆ ಪತ್ರವನ್ನು ಕಳುಹಿಸಿಕೊಟ್ಟಿದ್ದೆ. ಸಭಾಧ್ಯಕ್ಷರು ನನಗೆ ಅನುಮತಿಯನ್ನು ಕೊಟ್ಟಿದ್ದರು.

ಉಪಾಧ್ಯಕ್ಷರು:- ಆ ರೀತಿ ನೀವೇನಾದರೂ ಕಳುಹಿಸಿದ್ದರೆ ನಿಮಗೆ ಅವಕಾಶ ಕೊಡುತ್ತೇನೆ. ದಯಮಾಡಿ ಈಗ ತಾವು ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲು ಎದ್ದುನಿಂತಿದ್ದಾರೆ. ಅವರು ಉತ್ತರವನ್ನು ಕೊಡಲಿ.

(ಗೊಂದಲ)

ಶ್ರೀ ಕೆ.ಎಸ್ ಈಶ್ವರಪ್ಪ:- ಭಟ್ಕಳದಲ್ಲಿ ಅಮಾಯಕರ ಕೊಲೆಯಾಗಿದೆ. ಮುತ್ತಿಗೆ ಹಾಕಿದ್ದಂಥ ಜನರನ್ನು ಬಿಟ್ಟು ಬಿಟ್ಟಿದ್ದಾರೆ. ಅದಕ್ಕಾಗಿ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ; ಆದ್ದರಿಂದ 2-3 ನಿಮಿಷ ಅವಕಾಶವನ್ನು ಕೊಡಿ.

ಶ್ರೀ ಎಂ.ವೀರಪ್ಪಮೊಯಿಲಿ:- ಈಲ್ಡ್ ಆಗಿ ಸ್ವಲ್ಪ . ಸಾವಧಾನವಾಗಿ ಕೇಳಿದರೆ ಎಲ್ಲಾ ಆಗುತ್ತದೆ. ಇದು ಏನಾಗುತ್ತದೆ ಎಂದರೆ ಎಲ್ಲಾ ಸಮಸ್ಯೆಗಳು ಭಟ್ಕಳದಲ್ಲಿಯಾಗಲಿ ಎಲ್ಲಾದರಾಗಲಿ ಏತಕ್ಕೆ ಉದ್ಭವವಾಗುತ್ತದೆಂದರೆ ನಮ್ಮ ಭಾವನೆಗಳಿಂದಲೇ ಉದ್ಭವವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:- ದಯಮಾಡಿ ತಾವು ಉತ್ತರ ಕೊಡಿ.

(ಗೊಂದಲ)

ಶ್ರೀ ಕೆ.ಹೆಚ್ ರಂಗನಾಥ್(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಬಿ.ಜೆ.ಪಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೆಂಬ ಕಾರಣದಿಂದ ಅವರಿಗೆ ಹಕ್ಕಿದೆ ಎಂದು ಹೇಳಿ ಎನಾದರೂ ಮಾತನಾಡತಕ್ಕಂಥದ್ದು ಸರಿಯಲ್ಲ. ಮಾನ್ಯ ಯಾಹ್ಯಾರವರ ಹೆಸರನ್ನು ಏತಕ್ಕೆ ಅವರು ಇಲ್ಲಿ ಪ್ರಸ್ತಾಪ ಮಾಡಿದರು. ಅದನ್ನು ಕಡತದಿಂದ ತೆಗೆದುಹಾಕಬೇಕು. ಇದು ಸಾಮಾನ್ಯವಲ್ಲ. ಈಗ ನಾನು ಏನಾದರು ಹೇಳಿದರೆ ಅವರು ಸಹಿಸುತ್ತಾರಾ? ಅವರು ಮೊನ್ನೆ ಮೊನ್ನೆವರೆಗೂ ಅಧ್ಯಕ್ಷರಾಗಿರಲಿಲ್ಲ. ಸಾಧಾರಣ ಸದಸ್ಯರಾಗಿದ್ದರು. ನಾನು ತಮ್ಮ ಅಪ್ಪಣೆಯನ್ನು ಪಡೆದು ನಿಂತಿದ್ದೇನೆ, ಈ ಸದನದಲ್ಲಿ ಮಾತನಾಡಲಿಕ್ಕೆಹಕ್ಕಿದೆ ಎಂದು ಹೇಳಿ ಅದರ ದುರುಪಯೋಗವಾಗಬಾರದು. ಅವರು ಬಿ.ಜೆ.ಪಿ. ಅಧ್ಯಕ್ಷರು. ಹೋದ ಶಾಸನಸಭೆಯ ಬಜೆಟ್ ಅಧಿವೇಶನದಲ್ಲಿ ಸದಸ್ಯರಾಗಿದ್ದರು. ಈಗ ಅಧ್ಯಕ್ಷರಾಗಿದ್ದಾರೆ; ಅವರು ಯಾರ ಮೇಲೆ ಏನುಬೇಕಾದರೂ ಹೇಳಬಹುದೇ? ನೀವು ಏನು ಮಾತನಾಡುತ್ತೀರಿ, ಈ ಸಭೆಯಲ್ಲಿ ಬಾಯಿಗೆ ಬಂದಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಈ ಸಭೆಯ ಕ್ರಮವನ್ನು ಅರಿತು ಕಾನೂನು ಪ್ರಕಾರ ಮಾತನಾಡಬೇಕು.

(ಗೊಂದಲ)

ಶ್ರೀ ಕೆ.ಎಸ್ ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ....

6.05 ಪಿ.ಎಂ

ಉಪಾಧ್ಯಕ್ಷರು:- ನೀವು ಏನು ಹೇಳಿದರೂ ರೆಕಾರ್ಡಿಗೆ ಹೋಗುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಸದಸ್ಯರು ವಿಷಾದ ವ್ಯಕ್ತಪಡಿಸಬೇಕು ಈ ಸಭೆಯಲ್ಲಿ. ನಾಳೆ ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ನಾವು ಏನು ತೀರ್ಮಾನ ತೆಗೆದುಕೊಳ್ಳುತ್ತೇವೆ ಅದಕ್ಕೆ ಎಲ್ಲರೂ ಬದ್ಧರಾಗಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ.... ಉಪಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ.

ಉಪಾಧ್ಯಕ್ಷರು:- ತಾವು ಏನು ಹೇಳಿದರೂ ರೆಕಾರ್ಡಿಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಡುವುದಿಲ್ಲವೆಂದು ಹೇಳಲಿಲ್ಲ. ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು. ಈಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ: ತಾವು ಒಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು. ವಿಧಾನಸಭೆಯಲ್ಲಿ ಬೇರೆ ಒಬ್ಬರನ್ನು ಕರೆದಾಗ ತಾವು ಕುಳಿತುಕೊಳ್ಳುವಷ್ಟು ಸೌಜನ್ಯತೆ ತೋರಿಸದಿದ್ದರೆ ತಮ್ಮ ಸದಸ್ಯರನ್ನು ಹೇಗೆ ತಾವು ನಿಭಾಯಿಸುತ್ತೀರೆಂದು ನನಗೆ ಅರ್ಥವಾಗುವುದಿಲ್ಲ. ಕಡಿಮೆ ಪಕ್ಷ ಅಧ್ಯಕ್ಷರಾದರೂ ಕರೆದಾಗ, ಒಬ್ಬರು ನಿಂತಾಗ ಕುಳಿತುಕೊಳ್ಳುವಷ್ಟು ಸೌಜನ್ಯತೆ ತೋರಿಸದಿದ್ದರೆ ನಿಮಗೆ ಅವಕಾಶ ಎಲ್ಲಿ ಸಿಗುತ್ತದೆ? ನಾನು ನಿಂತಿದ್ದೇನೆ, ದಯವಿಟ್ಟು ಕುಳಿತುಕೊಳ್ಳಿ. ರಂಗನಾಥ್ ಅವರನ್ನು ಅಧ್ಯಕ್ಷರು ಕರೆದಾಗ ಕೂಡ ತಾವು ಎದ್ದು ನಿಂತೇ ಇದ್ದಿರಿ. ಇದರ ಅರ್ಥ ನೀವು ಎದ್ದುನಿಂತು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಅಲ್ಲ. ಮಾನ್ಯ ಅಧ್ಯಕ್ಷರೆ, ಭಟ್ಕಳದಲ್ಲಿ ನಡೆದಂಥ ವಿಚಾರ ಏನಿದೆ, ಅದು ಕೆಲವು ಪ್ರಚೋದನೆಗಳಿಂದ ನಡೆದಿದೆ. ಎರಡೂ ಕಡೆಯಿಂದ ಪ್ರಚೋದನೆ ಇದೆ. ಪ್ರಚೋದನೆ ಇದ್ದಾಗ ಈಶ್ವರಪ್ಪನವರಾಗಲಿ, ಆರ್.ಎನ್.ನಾಯಕರಾಗಲಿ ಮತ್ತು ನಮ್ಮೆಲ್ಲರ ಉದ್ದೇಶ ಕೂಡ ಅಲ್ಲಿ ಸಮಾಧಾನ ತರಬೇಕು, ನೆಮ್ಮದಿ ತರಬೇಕು ಎಂಬುದು. ಪರಸ್ಪರ ಎರಡು ಕೋಮುಗಳ ನಡುವೆ ಸೌಹಾರ್ದತೆ ಕಾಪಾಡಲಿಕ್ಕೆ ಅವರನ್ನು ಒಟ್ಟುಗೂಡಿಸತಕ್ಕ ಪ್ರಯತ್ನವನ್ನು ನಾವು ಮಾಡಬೇಕೇ ಹೊರತು ಅದನ್ನು ಒಡೆಯತಕ್ಕ ಪ್ರಯತ್ನ ಮಾಡಿದರೆ ಅದರಿಂದ ಪ್ರಯೋಜನ ಬರುವುದಿಲ್ಲ. ಇವತ್ತು ಅಲ್ಲಿ, ತಮ್ಮ ಸಂಸ್ಥೆಗಳೆಲ್ಲಾ ನಡೆಯುತ್ತಿವೆ. ಹಿಂದೂ ಏಕತಾ ಸಮಿತಿಯೆಂದು ನಡೆಯುತ್ತಿದೆ. ತಾವು ಧರಣ ಕೂರವುದಕ್ಕೆ ಮುಂದೆ ಹೇಗೆ ಬಂದಿರಿ ಅದೇ ಪ್ರಕಾರ ಸಮಾಧಾನವಾಗಿ ಇಂಥ ಸಂಸ್ಥೆಗಳು ಸುಮ್ಮನೆ ಇದ್ದರೆ ಎಲ್ಲಾ ಸಮಸ್ಯೆಗಳು ತಾನಾಗಿಯೇ ಪರಿಹಾರವಾಗುತ್ತವೆ. ಇಲ್ಲದಿದ್ದರೆ ಆ ಸಂಸ್ಥೆಗಳಿಗೆ ಪ್ರಚೋದನೆ ಕೊಡುತ್ತಾ ಹೋಗಬೇಕು, ಮತ್ತೊಂದು ಕಡೆ ಸರ್ಕಾರವನ್ನು ಆಕ್ಯೂಸ್ ಮಾಡಬೇಕು ಅಂದರೆ ಇದು ನಡೆಯುವುದಿಲ್ಲ. ಭಟ್ಕಳದಲ್ಲಿ ಎಲ್ಲರೂ ಸಹಕಾರ ಮಾಡಬೇಕು, ಎಲ್ಲಾ ಪಕ್ಷಗಳು ಸಹಕಾರ ಮಾಡಬೇಕು. ಬರೀ ಸರ್ಕಾರದಿಂದ, ಪೋಲೀಸರಿಂದ ಇದನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರದ ಜವಾಬ್ದಾರಿ ಇದೆ, ಪೋಲೀಸರ ಜವಾಬ್ದಾರಿ ಇದೆ. ಆದರೆ ಅದೇ ಕೊನೆಯ ಅಸ್ತ್ರವಲ್ಲ. ಅದಕ್ಕೆ ದೇಶಪಾಂಡೆಯವರು, ಆರ್.ಎನ್.ನಾಯಕ್ ಅವರು ಸಲಹೆ ಕೊಟ್ಟಿದ್ದಾರೆ. ನಾನು ಆ ಜಿಲ್ಲೆಯ ಮಾನ್ಯ ಸದಸ್ಯರನ್ನು ಕರೆದು ಒಂದು ಅಥವಾ ಎರಡನೇ ತಾರೀಖು ಸಭೆ ಮಾಡೋಣ ಎಂದಿದ್ದೇನೆ. ಪರಿಹಾರದ ವಿಚಾರದಲ್ಲಿ ತಾವು ಕೇಳಿದ್ದೀರಿ. ಪರಿಹಾರ

ಕಡಿಮೆ ಇದ್ದರೆ ಹೆಚ್ಚಿಗೆ ಪರಿಹಾರ ಕೊಡೋಣ. ಮನೆಗಳಿಗೆ, ಆಸ್ತಿಗಳಿಗೆ ಆದಂಥ ಆಘಾತವನ್ನು ತಣ್ಣಗೆ ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕು, ಅದನ್ನು ಖಂಡಿತ ಮಾಡೋಣ. ಅದಕ್ಕೆ ಒಂದು ಪರಿಹಾರ ಕಂಡುಹಿಡಿಯಬೇಕು. ಎಲ್ಲರೂ ಕೂಡಿಕೊಂಡು ಪರಿಹಾರ ಕಂಡುಹಿಡಿಯಬೇಕು. ಅದಕ್ಕೆ ಸಹಕಾರ ನಾನು ಕೊಡುತ್ತೇನೆ. ಒಂದನೇ ತಾರೀಖು ಸಭೆ ಮಾಡೋಣ. ತಮ್ಮನ್ನೂ ಬೇಕಾದರೆ ಕರೆಯುತ್ತೇನೆ. ಯಾವ ರೀತಿ ಪರಿಹಾರ ಮಾಡುವುದಕ್ಕಾಗುತ್ತದೆಂದು 2ನೇ ತಾರೀಖು ಈ ಸದನದಲ್ಲಿ ಹೇಳಿಕೆ ಕೊಡುತ್ತೇನೆ. ತಾವುಗಳು ಪ್ರಸ್ತಾಪ ಮಾಡಿದಂಥ ವಿಚಾರಗಳನ್ನೆಲ್ಲಾ ಗ್ರಹಿಸಿ ನಾವು ಕಾರ್ಯಕ್ರಮ ಹಾಕಿಕೊಳ್ಳೋಣ. ಇಲ್ಲಿಗೆ ಈ ಚರ್ಚೆ ಮುಗಿಸೋಣ. ಬಹುಶಃ 2ನೇ ತಾರೀಖು ಮಾನ್ಯ ಆರ್.ಎನ್. ನಾಯಕ್ ಅವರು ಈ ಪ್ರಶ್ನೆ ಎತ್ತಿದರೆ ಆದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ, ನಾನು....

ಉಪಾಧ್ಯಕ್ಷರು :– ಈಗ ಚುನಾವಣಾ ಪ್ರಸ್ತಾಪಗಳು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :– ಮಾನ್ಯ ಅಧ್ಯಕ್ಷರೇ,

ಶ್ರೀ ವಾಟಾಳ್‌ನಾಗರಾಜ್ :– ಈಶ್ವರಪ್ಪನವರು ಏನು ಹೇಳುತ್ತಾರೆಂದು ಕೇಳಿ.

ಉಪಾಧ್ಯಕ್ಷರು :– ಶೂನ್ಯವೇಳೆ ಪ್ರಸ್ತಾಪವನ್ನು ಪ್ರಶ್ನೋತ್ತರ ಮುಗಿದ ತಕ್ಷಣ ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ಈಗ...

ಉಪಾಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :– ಅವರಿಗೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ?

ಉಪಾಧ್ಯಕ್ಷರು :– ಅವರಿಗೆ ಅವಕಾಶ ಕೊಡುವುದಿಲ್ಲ ಎಂದು ನಾನು ಹೇಳಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :– ನಾವೂ ಮಾತನಾಡಬಹುದು, ಅವರೂ ಮಾತನಾಡಬಹುದು. ಆ ಅಧಿಕಾರ ಅವರಿಗೆ ಇದೆ.

ಶ್ರೀ ವಾಟಾಳ್‌ನಾಗರಾಜ್ :– ತಾವು ಹೇಳಿದ್ದು, ಮುಖ್ಯಮಂತ್ರಿಗಳದ್ದು ಆದಮೇಲೆ 2 ನಿಮಿಷ ಮಾತನಾಡಿ ಎಂದು. ಮತ್ತೆ ಮುಖ್ಯಮಂತ್ರಿಗಳೂ ಸಹ ನನ್ನ ಮಾತು ಆದ ಮೇಲೆ ಮಾತನಾಡಿ ಎಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯ್ಲಿ :– ಎರಡನೇ ತಾರೀಖು ಈ ವಿಚಾರ ಎತ್ತಬಹುದು. ಈ ವಿಚಾರದ ಬಗ್ಗೆ ನಾನು ಸಭೆ ಕರೆಯುತ್ತೇನೆ.

ಶ್ರೀ ಸಿ. ಬೈರೇಗೌಡ :– ಈಶ್ವರಪ್ಪನವರ ಪ್ಯೂಪಾಯಿಂಟ್ಸ್ ಕೇಳಿದರೆ ಉತ್ತರ ಕೊಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ :– ಅವರ ಪಾಯಿಂಟ್ಸ್ ಬಗ್ಗೆ ಕೂಡ 2ನೇ ತಾರೀಖು ಚರ್ಚೆ ಮಾಡೋಣ.

ಉಪಾಧ್ಯಕ್ಷರು :– ಎಲ್ಲರನ್ನೂ ಕರೆಸಿ ಚರ್ಚೆ ಮಾಡೋಣ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಅಲ್ಪ ಸಂಖ್ಯಾತರಿಗೆ ತೃಪ್ತಿಪಡಿಸಲು ನಾಟಕ ಮಾಡುತ್ತಿದ್ದೀರಿ. ಇದನ್ನು ಪ್ರತಿಭಟನೆ ಮಾಡಿ ನಾನು ಹೊರಗಡೆ ಹೋಗುತ್ತಿದ್ದೇನೆ.

(ಈ ಸಮಯದಲ್ಲಿ ಶ್ರೀ ಈಶ್ವರಪ್ಪನವರು ತಮ್ಮ ಸ್ಥಾನದಿಂದ ಸ್ವಲ್ಪ ದೂರ ಬಂದು ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ. ವೀರಪ್ಪಮೊಯ್ಲಿ :- ಈ ಪ್ರಚೋದನೆಯಿಂದ ನೀವು ಈ ದೇಶವನ್ನು ಸುಟ್ಟುಬಿಡುತ್ತಿದ್ದೀರಿ. ನೀವು ನಾಚಿಕೆ ಪಡಬೇಕು. ನೀವು ಎಲ್ಲಿಯವರೆಗೆ ಇಂತಹ ಪ್ರವೃತ್ತಿಯನ್ನು ಬಿಡುವುದಿಲ್ಲ ಅಲ್ಲಿಯವರೆಗೆ ಶಾಂತಿ ಸಮಾಧಾನ ಎನ್ನುವುದು ನಿಮ್ಮ ಡಿಕ್ಷ್ನರಿಯಲ್ಲೇ ಇಲ್ಲ.

(ಶ್ರೀ ಈಶ್ವರಪ್ಪನವರು ಹೊರಗೆ ನಿಂತು ಮಾತನಾಡುತ್ತಿದ್ದರು)

ಶ್ರೀ ಆರ್.ವಿ. ದೇಶಪಾಂಡೆ :- ಅವರು ನಮ್ಮ ಪಕ್ಷದ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಇದೇ ರೀತಿ ಆಪಾದನೆ ಮಾಡಿದರೆ ಈ ಮನೆ ಒಳಗೆ ಹಾಗೂ ಮನೆ ಹೊರಗೆ ನೋಡಿಕೊಳ್ಳುತ್ತೇವೆ. ಇಂತಹ ನಾಟಕ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ :- ಕೋಮು ಗಲಭೆಗೆ ಕಾರಣೀಭೂತರಾದವರಿಗೆ ಶಾಂತಿ ಬಗ್ಗೆ ಮಾತನಾಡುವುದಕ್ಕೆ ಹಕ್ಕು ಇಲ್ಲ.

(ಶ್ರೀ ಈಶ್ವರಪ್ಪನವರು ಹೊರಗೆ ನಿಂತು ಮಾತನಾಡುತ್ತಿದ್ದರು)

ಶ್ರೀ ಬಿ.ಹೆಚ್. ಬನ್ನಿಕೋಡ್ :- ಬಿಜೆಪಿಯವರು ಕೋಮುಗಲಭೆಯನ್ನು ಈ ರಾಜ್ಯದಲ್ಲಿ ಇನ್ನೂ ಮುಂದುವರಿಯಬೇಕೆನ್ನುವ ಪ್ರಚೋದನೆಯಲ್ಲಿ ಇದ್ದಾರೆ. ಇನ್ನೂ ಹೆಚ್ಚು ಆಗಬೇಕೆಂದು ಅವರ ಅಭಿಪ್ರಾಯ.

(ಗೊಂದಲ)

ಉಪಾಧ್ಯಕ್ಷರು :- ಆರ್ಡರ್; ಆರ್ಡರ್. ನೀವು ಅಲ್ಲಿನಿಂತು ಏನು ಮಾತನಾಡಿದರೂ ಅದು ಕಡತಕ್ಕೆ ಹೋಗುವುದಿಲ್ಲ. ಏನು ಹೇಳಬೇಕೆಂದರೂ ತಮ್ಮ ಜಾಗಕ್ಕೆ ಹೋಗಿ ಮಾತನಾಡಿ

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ: ಅಧ್ಯಕ್ಷರೇ, ಕೋಮು ಸೌಹಾರ್ದದ ಬಗ್ಗೆ ಯಾವುದೇ ರೀತಿಯಲ್ಲಿ ಮಾತನಾಡುವುದಕ್ಕೆ ಈ ಪಕ್ಷಕ್ಕೆ ಈಶ್ವರಪ್ಪನವರಿಗೆ, ಈ ಸದನದಲ್ಲಿ ಅಧಿಕಾರ ಇಲ್ಲ. ಅದನ್ನು ನಾವು ಮೊಟಕು ಮಾಡುವುದಿಲ್ಲ. ಈ ದೇಶದ ಜನರು ಮಾಡುತ್ತಾರೆ

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ(ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು. ಅವರ ನಡವಳಿಕೆ ಯಾವ ಪ್ರಕಾರ ಇರಬೇಕು, ಅವರು ಯಾವ ಪ್ರಕಾರ ಮಾತನಾಡಬೇಕು ಎನ್ನುವುದು ಅವರಿಗೇ ಗೊತ್ತಾಗಬೇಕು. ಅವರು ಹೊರಗೆ ಹೋಗಲಿಕ್ಕೂ ತಯಾರಾಗಿಲ್ಲ. ಇಲ್ಲಿ ನಿಂತು ಮಾತನಾಡುತ್ತಿದ್ದಾರೆ. ಭಟ್ಕಳ್ ಜನರ ಬಗ್ಗೆ ಇವರಿಗೆ ಎಷ್ಟು ಚಿಂತನೆಯಿದೆ, ನಾಡಿನ ಜನರ ಬಗ್ಗೆ ಎಷ್ಟು ಚಿಂತನೆಯಿದೆ ಎನ್ನುವುದು ನಮಗೆ ಗೊತ್ತಿದೆ. ಇವತ್ತು ಅವರು ಜನತಾದಳ ಪಕ್ಷದ ಮೇಲೆ ಏನು ಆಪಾದನೆ ಮಾಡಿದ್ದಾರೆ ಅದನ್ನು ನಾನು ಖಂಡನೆ ಮಾಡುತ್ತೇನೆ. ಇವತ್ತು ಅವರು ಎಷ್ಟು ಬೇಜವಾಬ್ದಾರಿಯಿಂದ ಇದ್ದಾರೆಂದು ನಾನು ತೋರಿಸುತ್ತೇನೆ ಭಟ್ಕಳ್‌ನಲ್ಲಿ ಇನ್ಸಿಡೆಂಟ್ ಆಯಿತು. ನಾನು ಭಟ್ಕಳ್‌ಗೆ ಹೊರಟಿದ್ದೆ. ಹಿಂದೂ ಏಕತಾ ವೇದಿಕೆಯವರು ಬಂದ್‌ಗೆ ಕಾಲ್ ಕೊಟ್ಟಿದ್ದು ನನ್ನ ಗಮನಕ್ಕೆ ಬಂದಿರಲಿಲ್ಲ. ನಾನು ಹೊರಟಿದ್ದೇನೆ;

ಭಟ್ಕಳ್‌ನಲ್ಲಿ ಅವರ ಕಾಲ್ ಇದೆ; ಅಲ್ಲಿ ಕರ್ಫ್ಯೂ ಇದೆ. ಪೋಲೀಸರು ಏನಾದರೂ ಮಾಡಿ ಪರಿಸ್ಥಿತಿಯನ್ನು ಹತೋಟಿಯಲ್ಲಿ ತರಬೇಕೆಂದು ಪ್ರಯತ್ನ ಮಾಡುವಾಗ ಇವರು ಸಿರಸಿಯಲ್ಲಿ ಪ್ರೆಸ್ ಕಾನ್ಫರೆನ್ಸ್ ಮಾಡಿ ಬಂದ್‌ಗೆಕಾಲ್ ಕೊಡುತ್ತಾರೆ. ನಾನು ಭಟ್ಕಳ್‌ಗೆ ಹೋಗಿ ವಾಪಸ್ಸು ಬರುತ್ತಿದ್ದೇನೆ; ಇಡೀ ಜಿಲ್ಲೆಯಲ್ಲಿ ಎಲ್ಲಾ ಕಡೆ ಗಲಭೆ. ಹಳಿಯಾಳ, ಮುಂಡಗೋಡ, ದಾಂಡೇಲಿ ನನ್ನ ಮತದಾರ ಕ್ಷೇತ್ರ ಒಂದೇ ಒಂದು ಬಿಟ್ಟರೆ ಎಲ್ಲಾ ಕಡೆ ಗಲಭೆ. ಪ್ರಚೋದನೆಯಿಂದ ಮನೆಗಳನ್ನು ಸುಟ್ಟಿದ್ದಾರೆ. ಅಲ್ಪಸಂಖ್ಯಾತರ ಮೇಲೆ ಚಾಕುಚೂರಿ ಹಾಕಿದ್ದಾರೆ. ಇದು ಇವರ ಕೃತ್ಯ. ಒಂದು ಮಾತು ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಚೋದನೆ ಎರಡೂ ಕಡೆ ಆಗಿದೆ, ಒಂದೇ ಕಡೆ ಆಗಿಲ್ಲ. ಹಿಂದೂಗಳೂ ಮಾಡಿದ್ದಾರೆ; ಮುಸ್ಲೀಮರು ಮಾಡಿದ್ದಾರೆ. ಅಲ್ಲಿ ಹಿಂದೂಗಳಾಗಲೀ ಮುಸ್ಲಿಂರಾಗಲೀ ಏನಿದ್ದಾರೆ ಅವರು ಬಹಳ ಒಳ್ಳೆಯ ಜನರು. ಅವರು ಸಜ್ಜನರು; ಬಹಳ ಪ್ರೀತಿ ವಿಶ್ವಾಸದಿಂದ ಇದ್ದಾರೆ. ಸೌಹಾರ್ದತೆಯಿಂದ ಇದ್ದಾರೆ. ಆದರೆ ಕೆಲವು ಜನ ಸಮಾಜಘಾತುಕ ಶಕ್ತಿಗಳಿಗೆ ಎನ್‌ಕರೇಜ್ ಮಾಡುತ್ತಿದ್ದಾರೆ. ಪೋಲೀಸ್ ಅಧಿಕಾರಿ ಬರ್ಮನ್‌ರವರಿಗೆ ನಾನು ಹೇಳಿದೆ, ಲೋಕಲ್ ಜನ ಏನೂ ಮಾಡುತ್ತಿಲ್ಲ; ಹೊರಗಿನ ಕೆಲವು ಜನ ಬಂದು ಪ್ರಚೋದನೆ ಮಾಡುತ್ತಿದ್ದಾರೆ, ಅದನ್ನು ನೋಡಿಯೆಂದು ಹೇಳಿದೆ. ಈಶ್ವರಪ್ಪನವರು ಏನು ಹೇಳಿದ್ದಾರೆ, ಅದು ರಾಜಕೀಯ ಸ್ಟಂಟ್ ಇರಬಹುದು. ಅದರಿಂದ ಯಾವ ಲಾಭವೂ ಅವರಿಗೆ ಸಿಗಲಿಕ್ಕೆ ಸಾಧ್ಯವಿಲ್ಲ. ಇವತ್ತು ಜನತಾದಳದ ಪರಿಸ್ಥಿತಿ ಏನಿದೆ, ನಾನು ಏನಿದ್ದೇನೆ ಎಂಬುದೆಲ್ಲಾ ನಾಡಿನ ಜನರಿಗೆ ಗೊತ್ತು. ಜನರು ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ರೆಕಾರ್ಡ್ ಸರಿಯಾಗಿರಬೇಕು. ದಯವಿಟ್ಟು ತಾವು ಸಹಕಾರ ಮಾಡಬೇಕು.

ಶ್ರೀ ವಿಜಯಕುಮಾರ್ ಶೆಟ್ಟಿ : – ಮಾನ್ಯ ಉಪಾಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಘಟನೆಯನ್ನು ಇಲ್ಲಿ ಹೇಳಲಿಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮೂರು ದಿವಸಗಳಿಂದ ಬರುತ್ತಾ ಇದೆ, ಅದು ಲ್ಯಾಪ್ಸ್ ಆಗುತ್ತಾ ಇದೆ.

ಉಪಾಧ್ಯಕ್ಷರು : – ನಿಮಗೆ ಅವಕಾಶ ಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : – ನಾನು ಈ ವಿಚಾರದಲ್ಲಿ ಸದನದ ಸಮಯವನ್ನು ವ್ಯರ್ಥ ಮಾಡುವುದಕ್ಕೆ ಬಯಸುವುದಿಲ್ಲ. ಆದರೆ ಪ್ರತಿ ಕ್ಷಣದಲ್ಲಿಯೂ ನಮ್ಮ ಭಾರತೀಯ ಜನತಾ ಪಕ್ಷದ ಸದಸ್ಯರು ನಮ್ಮಮೇಲೆ ಒಂದು ಆಪಾದನೆ ಮಾಡುತ್ತಿದ್ದಾರೆ. ಮಾನ್ಯ ಶ್ರೀ ಕೆ.ಹೆಚ್. ರಂಗನಾಥ್‌ರವರ ಬಗ್ಗೆ ಸದನದ ಎಲ್ಲಾ ಸದಸ್ಯರಿಗೂ ಗೌರವವಿದೆ. ಅವರು ಎದ್ದುನಿಂತು ಈಶ್ವರಪ್ಪನವರನ್ನು ಕುರಿತು ಒಂದು ಮಾತು ಹೇಳಿದರು. ನೀನು ಇನ್ನೂ ಹುಡುಗ ಇದ್ದಿ; ನೀನು ಆರ್ಡಿನರಿ ಸದಸ್ಯನಲ್ಲ. ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ ಎಂದು ಹೇಳಿದರು.

ಶ್ರೀ ವಾಟಾಳ್‌ನಾಗರಾಜ್ : – ಮಾನ್ಯ ರಂಗನಾಥ್‌ರವರು ಈಶ್ವರಪ್ಪನವರನ್ನು ಹುಡುಗ ಎಂದು ಹೇಳಲಿಲ್ಲ ಇದೇನು? ನೀವು ತಿರುಗಿಸಿ ಹೇಳಬಾರದು? ಎಲ್ಲಿಯಾದರೂ ಉಂಟಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : – ಮಾನ್ಯ ರಂಗನಾಥ್‌ರವರು ಹೇಳಲಿಲ್ಲ. ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್ : – ಮಾನ್ಯ ಈಶ್ವರಪ್ಪನವರನ್ನು ಮಾನ್ಯ ರಂಗನಾಥ್‌ರವರು

ಹಿಯ್ಯಾಳಿಸಬೇಕೆಂದು ಹೇಳಲಿಲ್ಲ ಗೌರವ ಇಟ್ಟುಕೊಂಡು ಆ ಮಾತನ್ನು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾನು ಹೇಳುವುದನ್ನು ಅರ್ಥಮಾಡಿಕೊಳ್ಳದೆ ಮಾತನಾಡಿದರೆ ಹೇಗೆ? ನಾನು ಹೇಳಿದ್ದು ಮಾನ್ಯ ರಂಗನಾಥ್‌ರವರಾಗಲೀ, ಹುಚ್ಚಮಾಸ್ತಿಗೌಡರಾಗಲೀ, ರಾಜಶೇಖರ ಮೂರ್ತಿಯವರಾಗಲೀ, ರಾಮಸ್ವಾಮಿಯವರಾಗಲೀ, ನಾಗಮ್ಮ ಕೇಶವಮೂರ್ತಿಯವರಾಗಲೀ ಇಂತಹವರು ಮಾತನಾಡುವಾಗ ಈ ಸದನಕ್ಕೆ ಬಂದಿರತಕ್ಕ ನಮ್ಮಂತಹವರು ಸಂಸದೀಯ ವ್ಯವಹಾರಗಳನ್ನು ಕಲಿಯಬೇಕಾಗುತ್ತದೆ ಅವರಿಗೆ ತಲೆಬಾಗಿಸಬೇಕಾಗುತ್ತದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಅನೇಕ ಸಂದರ್ಭಗಳಲ್ಲಿ ಮೇಲೆ ಏಳುತ್ತಾರೆ; ಆಗ ನಾವು ಕುಳಿತುಕೊಳ್ಳುತ್ತೇವೆ. ನಿಮಗೆ ಕನ್ನಡದ ಬಗ್ಗೆ ಇರತಕ್ಕ ಅಭಿಮಾನದ ಬಗ್ಗೆ ನಮಗೆ ನಿಜವಾಗಿಯೂ ಹೆಮ್ಮೆಯಿದೆ. ಅದರ ಬಗ್ಗೆ ಸಂಶಯವಿಲ್ಲ. ಪ್ರಶ್ನೆ ಇರತಕ್ಕದ್ದು ಎರಡು ಕೆಲಸವನ್ನು ಅವರು ಮಾಡುತ್ತಾರೆ. ಪ್ರತಿ ಸಂದರ್ಭದಲ್ಲೂ ಒಂದು ಜವಾಬ್ದಾರಿ ಸ್ಥಾನದಲ್ಲಿರುವವರು ರಾಷ್ಟ್ರೀಯ ಪಕ್ಷದ ಅಧ್ಯಕ್ಷರಾಗಿದ್ದವರು ಈ ಸದನದಲ್ಲಿ ಒಂದು ದಿನ ನಾವು ಇನ್ನು ಮುಂದೆ ಧರಣಿ ಮಾಡುವುದಿಲ್ಲವೆಂದು ಹೇಳಿದರು ನಮಗೆ ಅಟಲ್ ಬಿಹಾರಿ ವಾಜಪೇಯಿಯವರು ಸಂಸತ್ತಿನಲ್ಲಿ ಹಾಗೂ ಇಲ್ಲಿ ಯಾವರೀತಿ ವರ್ತನೆ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ನಾವು ಧರಣಿ ಮಾಡುವುದಿಲ್ಲ ಎಂದರು. ಆದರೆ ಆದರ ಮುಂದಿನ ವಾರದಲ್ಲಿಯೇ ಧರಣಿ ಪ್ರಾರಂಭ ಮಾಡಿದರು. ಅವರ ದ್ವಂದ್ವಗಳನ್ನು ಹೇಳುತ್ತಿದ್ದೇನೆ ನಾನು. ಪ್ರತಿಯೊಂದು ವಿಚಾರಕ್ಕೂ ಬರ್ತೀವಿ ಬರ್ತೀವಿ ಅಂತ ಹೇಳುತ್ತಾರೆ. ಈಗ ಸಮಯದ ಪ್ರಕಾರವಾಗಿ ಪ್ರತಿಯೊಬ್ಬ ಸದಸ್ಯನಿಗೂ ಸಹಿತ ಇಲ್ಲಿ ಮಾತನಾಡುವ ಹಕ್ಕು ಇದೆ. ಆದರೆ ಯಾವ್ಯಾವ ಪಕ್ಷಕ್ಕೆ ಎಷ್ಟೆಷ್ಟು ಸಮಯ ಎಂದು ತಾವು ನಿರ್ಧಾರ ಮಾಡಬೇಕಾಗುತ್ತದೆ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಚಾರಕ್ಕೆ ಎಷ್ಟು ಮಹತ್ವ ಇದೆಯೆಂದು ನಮಗೂ ಅರ್ಥವಾಗುತ್ತದೆ. ಕೊನೆಯದಾಗಿ ಅವರು ಎರಡು ಆಪಾದನೆಗಳನ್ನು ಮಾಡುತ್ತಾರೆ. ಒಂದು, ಏನು ಆಪಾದನೆ ಮಾಡುತ್ತಾರೆ ಎಂದರೆ, ನೀವು ಕಾಂಗ್ರೆಸ್ ಜೊತೆಯಲ್ಲಿ ಶಾಮೀಲಾಗಿ ಹೋಗಿದ್ದೀರಾ ಎಂದು. Suppose the secular and democratic forces and leftist forces in this country fail, there should be an alternative and we are the alternative. We are proud of it. ನಾವು ಇಪ್ಪತ್ತೆರಡು ಜನ ಇರಬಹುದು, ಎರಡೇ ಜನ ಇರಬಹುದು. ಆದರೆ ವಿಚಾರ ಮತ್ತು ಮೌಲ್ಯ ಬಹಳ ಮಹತ್ವದ್ದು. ಇವತ್ತು ಪ್ರಜಾಪ್ರಭುತ್ವದ ರಥೋತ್ಸವ ಮಾಡಬೇಕು ಎಂಬ ಮಾತನ್ನು ನಿನ್ನೆ ಏನು ಹೇಳಿದಿರಿ, ಅದು ನಮ್ಮೆಲ್ಲರ ಕರ್ತವ್ಯ. ಇವರು ಏನು ಹೇಳುತ್ತಾರೆ ಎಂದರೆ, ನಾವು ಕಾಂಗ್ರೆಸ್ ಜೊತೆಯಲ್ಲಿ ಸೇರಿಕೊಂಡುಬಿಟ್ಟಿದ್ದೇವೆ ಕಾಂಗ್ರೆಸ್ ಜೊತೆಯಲ್ಲಿ ಶಾಮೀಲಾಗಿದ್ದೇವೆಂದು ಹೇಳುತ್ತಾ ಅದನ್ನು ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳತಕ್ಕಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಇದನ್ನು ನಾವು ಖಂಡಿಸುತ್ತೇವೆ. ಇದು ಮೊದಲನೆಯದು. ಎರಡನೆಯದಾಗಿ, ನಾವು ಕಾಂಗ್ರೆಸ್ ಜೊತೆಯಲ್ಲಿ ಸೇರಿಲ್ಲ. ಹಿಂದೆ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದರು ಆ ಸಂದರ್ಭದಲ್ಲಿ ಸಹಿತ ಇದೇ ಆಪಾದನೆಯನ್ನು ಅಂದರೆ ಕಾಂಗ್ರೆಸ್ ಜೊತೆಯಲ್ಲಿ ಶಾಮೀಲಾಗಿದ್ದೀರಿ ಎಂದು ಮಾಡಿದ್ದರು. ಇವತ್ತು ನಾವು ಕೃಷ್ಣಾರವರ ರಾಜೀನಾಮೆಯನ್ನು ಕೇಳಲಿಲ್ಲ. ಇವತ್ತು ನಾವು ಇಡೀ ಸರ್ಕಾರದ ರಾಜೀನಾಮೆಯನ್ನು, ಮುಖ್ಯಮಂತ್ರಿ ವೀರಪ್ಪಮೊಯಿಲಿಯವರ ರಾಜೀನಾಮೆಯನ್ನು ಕೇಳಿದ್ದೆವು. ನಿಮ್ಮ ಸರ್ಕಾರ ವಿಫಲವಾಗಿದೆಯೆಂದು

ಹೇಳಿದ್ದೆವು. ಆದರೆ ಇವತ್ತು ಇವರು ಏನು ಹೇಳುತ್ತಿದ್ದಾರೆ ಎಂದರೆ ನಾವು ಮೊಯಿಲಿ ಅವರ ಜೊತೆಯಲ್ಲಿ ಸೇರಿಕೊಂಡುಬಿಟ್ಟಿದ್ದೇವೆ ಎಂದು. ಯಾವುದರಲ್ಲಿ ನಾವು ಸೇರಿದ್ದೇವೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಇದು ರಾಜ್ಯದ ಜನತೆಗೆ ಗೊತ್ತಾಗಬೇಕು. ನಮ್ಮದು ಜವಾಬ್ದಾರಿಯುತವಾದ ಒಂದು ರಾಷ್ಟ್ರೀಯ ಪಕ್ಷವಾಗಿದೆ. ನಾವು ಇವತ್ತು ಸಮಾಜವಾದದ ಸಿದ್ಧಾಂತಕ್ಕೆ ಮತ್ತು ಜಾತ್ಯಾತೀತ ಸಿದ್ಧಾಂತಕ್ಕೆ ಬದ್ಧವಾಗಿ ಇರತಕ್ಕಂಥ ಪಕ್ಷ ಎನ್ನುವ ದೃಷ್ಟಿಯಿಂದ ಈ ವಿಚಾರವನ್ನು ಸೃಷ್ಟಿ ಮಾಡಿದ್ದೇನೆ. ಕೊನೆಯದಾಗಿ ಇವತ್ತು ರಾಷ್ಟ್ರದಲ್ಲಿ ಕೋಮು ಗಲಭೆಗಳಿಗೆ ಪ್ರಚೋದನೆ ಕೊಡತಕ್ಕಂಥ ಶಕ್ತಿ ಇವರೇ ಆಗಿದ್ದಾರೆ. ಇದು ನಮಗೆಲ್ಲರಿಗೂ ಸಹಿತ ಗೊತ್ತಿರತಕ್ಕಂಥ ವಿಚಾರ. ಭಟ್ಕಳದಲ್ಲಿ ಗಲಭೆಯಾಗಬೇಕಾದರೆ ಎರಡೂ ಕಡೆಯಿಂದ ಪ್ರಚೋದನೆ ಆಗಿದೆ.ಇದು ಒಂದು ಕಡೆಯಿಂದ ಆಗಿರತಕ್ಕಂಥ ಪ್ರಚೋದನೆ ಅಲ್ಲ. ಒಬ್ಬರು ಗಣ್ಯ ವ್ಯಕ್ತಿಯಾಗಿರತಕ್ಕಂಥ ಶ್ರೀ ಯಾಹ್ಯಾ ರವರ ಬಗ್ಗೆ ಇವರು ಹೋಗಿ ಪ್ರಚೋದನೆ ಮಾಡಿಬಿಟ್ಟರು. ಅಂತ ಹೇಳಿದರೆ ನಾಳೆ ಸಿಂಧ್ಯರವರು ಹೋಗಿದ್ದರು ಪ್ರಚೋದನೆ ಮಾಡಿದರು ಅಂತ ಹೇಳಿದರೆ, ಶ್ರೀ ದೇಶಪಾಂಡೆಯವರು ಹೋಗಿದ್ದರು, ಪ್ರಚೋದನೆ ಮಾಡಿದರು ಅಂತ ಹೇಳಿದರೆ ಇದಕ್ಕೆ ಅರ್ಥವೇನು? ಯಡಿಯೂರಪ್ಪನವರೂ ಹೋಗಿದ್ದರು.ಯಾಹ್ಯಾರವರು ಹೋಗಿದ್ದರು. ದೇಶಪಾಂಡೆಯವರೂ ಸಹ ಹೋಗಿದ್ದರು. ಅಂದರೆ ಹೋಗಲೇಬೇಕಾಗುತ್ತದೆ. ನಾಳೆಯ ದಿವಸ ನೀವೂ ಹೋಗಬೇಕಾಗುತ್ತದೆ. ವಿರೋಧ ಪಕ್ಷದಲ್ಲಿದ್ದಾಗ ಅಥವಾ ಅಧಿಕಾರದಲ್ಲಿದ್ದಾಗ ಅದು ನಮ್ಮ ಕರ್ತವ್ಯವಾಗಿರುತ್ತದೆ. ಆ ದೃಷ್ಟಿಯಿಂದ ಮಾನ್ಯ ಈಶ್ವರಪ್ಪನವರ ವರ್ತನೆ ಏನಿದೆ, ಅದನ್ನು ಖಂಡಿಸುತ್ತಾ ಇದು ರೆಕಾರ್ಡ್ಸ್ ಮೇಲೆ ಹೋಗಬೇಕು ಎನ್ನುವ ದೃಷ್ಟಿಯಿಂದಾಗಿ ನಾನು ಮಾತನಾಡಿದ್ದೇನೆ.

ದ.ಅ. ವಿಷಯ:- ಮಂಗಳೂರು ರಿಫೈನರೀಸ್ ಪ್ರಾಜೆಕ್ಟ್ ಸಲುವಾಗಿ ಜನರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ.

ಶ್ರೀ ವಿಜಯಕುಮಾರಶೆಟ್ಟಿ (ಸುರತ್ಕಲ್):- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಮಂಗಳೂರು ರಿಫೈನರೀಸ್ ಪ್ರಾಜೆಕ್ಟ್ ಬರುತ್ತಿದೆ. ಬಹುಶಃ ಇದು ಎಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಈಗ ಏನಾಗಿದೆ. ಎಂದರೆ ಪುನರ್ ನಿವೇಶನ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಮಳೆ ಬರುತ್ತಾ ಇದೆ; ಇವತ್ತು ಬೆಳಿಗ್ಗೆ ಸುಮಾರು ಇನ್ನೂರು ಜನ ಪೋಲೀಸರು ಬಂದು ಬಲಾತ್ಕಾರವಾಗಿ ಅಲ್ಲಿ ಒಕ್ಕಲೆಬ್ಬಿಸತಕ್ಕಂಥ ಕಾರ್ಯಕ್ರಮ ಮಾಡಿದ್ದಾರೆ. ಇವತ್ತು ಇವರಿಗೆ ಪುನರ್-ನಿವೇಶನ ಕೊಡುವುದಕ್ಕೆ ಪರಿಹಾರಧನವನ್ನು ಕೊಡುತ್ತೀರಿ. 24-48 ಗಂಟೆಗಳಲ್ಲಿ ಅವರನ್ನು ಒಕ್ಕಲೆಬ್ಬಿಸಿ ಬೇರೆ ಕಡೆಗೆ ಹೋಗಬೇಕೆಂದು ಹೇಳುತ್ತಿದ್ದಾರೆ. ಈ ಮಳೆ ಬರುವಂತಹ ಸಂದರ್ಭದಲ್ಲಿ ಅವರು ಎಲ್ಲಿಗೆ ಹೋಗಬೇಕು? ಒಂದು ಮಾನವೀಯತೆ ದೃಷ್ಟಿಯಿಂದಲಾದರೂ ಅವರಿಗೆ ಐದು ಅಥವಾ ಆರು ತಿಂಗಳು ಕಾಲಾವಕಾಶವನ್ನು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಆಗ್ರಹಿಸುತ್ತೇನೆ. ಅಲ್ಲಿಯ ಅಧಿಕಾರಿಗಳ ಹತ್ತಿರ ಒಂದೆರಡು ಮಾತು ಆಡಿದ ಕೂಡಲೇ ನಮಗೆ ಚೀಫ್ ಸೆಕ್ರೆಟರಿ ಅವರಿಂದ ಮೆಸೇಜ್ ಬಂದಿದೆ, ಈವತ್ತೇ ನೀವು ಖಾಲಿ ಮಾಡಬೇಕೆಂದು ಬಹಳ ಫ್ರೋರ್ಸ್‌ನ್ನು ಉಪಯೋಗಿಸುತ್ತಿದ್ದಾರೆ. ಇನ್ನೂ ಇದೇ ತರಹ ಆದರೆ ಜನರು ಖಂಡಿತವಾಗಿಯೂ ದಂಗೆ ಏಳುವ ಪರಿಸ್ಥಿತಿ ಉಂಟಾಗುತ್ತದೆ. ಆದೇ ಪ್ರಕಾರ ಈ ಕ್ಷೇತ್ರದಲ್ಲಿ ಈಗ ಒಕ್ಕಲೆಬ್ಬಿಸಲ್ಪಡುವವರು ಈಗಾಗಲೇ ಒಂದು ಸಲ ಕೊಂಕಣ ರೈಲ್ವೆ ಮತ್ತು ಕುದುರೆಮುಖ ಪ್ರಾಜೆಕ್ಟ್‌ಗೆ ಪುನರ್ ನಿವೇಶನಗೊಂಡವರು;